# ಹಿರೇಕೆರೂರ ಪ್ರದೇಶದಲ್ಲಿ ಕರ ನಿರಾಕರಣೆ ಆಂದೋಲನ

**ನಾಗರಾಜ ತಳವಾರ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

DOI: https://doi.org/10.5281/zenodo.17411597

## ABSTRACT:

ಈ ಲೇಖನವು ಮುಂಬೈ-ಕರ್ನಾಟಕದ ಹಿರೇಕೆರೂರ ಪ್ರದೇಶದಲ್ಲಿ 1931 ರಲ್ಲಿ ನಡೆದ ಕರ ನಿರಾಕರಣೆ ಆಂದೋಲನದ (ಕರಬಂದಿ) ಮಹತ್ವವನ್ನು ವಿಶ್ಲೇಷಿಸುತ್ತದೆ. 1929-30ರ ತೀವ್ರ ಬರಗಾಲದಿಂದ ರೈತರು ಕಂಗೆಟ್ಟಿದ್ದ ಸಂದರ್ಭದಲ್ಲಿ, ಬಾರಡೋಲಿ ಮತ್ತು ಕಾನೂನುಭಂಗ ಚಳುವಳಿಯಿಂದ ಸ್ಫೂರ್ತಿಗೊಂಡು ಈ ಹೋರಾಟ ಪ್ರಾರಂಭವಾಯಿತು. ಕಚವಿಯ ವೀರನಗೌಡ ಪಾಟೀಲರು ಮತ್ತು ತಿ.ರು. ನೇಸ್ವಿ ಅವರ ನಾಯಕತ್ವದಲ್ಲಿ ಹಂಸಭಾವಿಯಲ್ಲಿ ರೈತ ಪರಿಷತ್ತು ಸೇರಿ ಕಂದಾಯ ಕಟ್ಟದಿರುವ ನಿರ್ಣಯ ಕೈಗೊಂಡಿತು. ಚಳುವಳಿಯು ಉಗ್ರ ಸ್ವರೂಪ ಪಡೆದು ದೇಶದ ಗಮನ ಸೆಳೆಯಿತು. ಸರಕಾರವು ದಬ್ಬಾಳಿಕೆ ನಡೆಸಿದರೂ, ರೈತರ ಅಹಿಂಸಾತ್ಮಕ ಪ್ರತಿರೋಧದಿಂದ ಸರ್ಕಾರವು ಒಪ್ಪಂದಕ್ಕೆ ಬರಲು ಒತ್ತಾಯಿಸಲ್ಪಟ್ಟಿತು. ಇದರ ಫಲವಾಗಿ, 46 ಸಾವಿರ ರೂಪಾಯಿಗಳ ನೀರ ಸಾರಿಗೆ ಸೂಟ್ ಸೇರಿದಂತೆ ಭಾರಿ ಮೊತ್ತದ ಕಂದಾಯವನ್ನು ರದ್ದುಗೊಳಿಸಲಾಯಿತು. ಈ ಯಶಸ್ವಿ ಹೋರಾಟಕ್ಕಾಗಿ ವೀರನಗೌಡರು 'ಸರದಾರ' ಎಂಬ ಬಿರುದನ್ನು ಪಡೆದರು. ಇದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿರೇಕೆರೂರನ ಪಾತ್ರವನ್ನು ದಾಖಲಿಸುತ್ತದೆ.

## KEYWORDS:

ಕರ ನಿರಾಕರಣೆ ಆಂದೋಲನ, ಹಿರೇಕೆರೂರ, ಸರದಾರ ವೀರನಗೌಡ ಪಾಟೀಲ, ಕಾನೂನುಭಂಗ ಚಳುವಳಿ, ಬರಗಾಲ.

**ಪೀಠಿಕೆ:**

ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಹಾವೇರಿ ಜಿಲ್ಲೆಯ ಹಿರೇಕೆರೂರ ಪ್ರದೇಶ ಸಹ ಸಕ್ರಿಯವಾಗಿ ಭಾಗವಹಿಸಿ ರಾಷ್ಟ್ರಕ್ಕೆ ತನ್ನ ಸೇವೆಯನ್ನು ಸಲ್ಲಿಸಿದೆ. ಹೋರಾಟದಲ್ಲಿ ಈ ತಾಲೂಕಿನ ಹೋರಾಟಗಾರರು ಹಲವು ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮುಂಬೈಕರ್ನಾಟಕದ ರಾಜಕೀಯದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. "ಹಿರೇಕೆರೂರ ಪ್ರದೇಶದ ಕೆಲ ಸ್ವಾತಂತ್ರ್ಯ ಹೋರಾಟಗಾರರು" ತಮ್ಮ ನಾಯಕತ್ವ ಹಾಗೂ ಪ್ರಭಾವವನ್ನು ಈ ಭಾಗಕ್ಕೆ ಮಾತ್ರ ಸೀಮಿತಗೊಳಿಸದೆ, ಅಖಂಡ ಧಾರವಾಡ ಜಿಲ್ಲೆಯಲ್ಲಿಯೂ ತಮ್ಮ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ.

ಧಾರವಾಡಹುಬ್ಬಳ್ಳಿಗಳಲ್ಲಿ ಪಸರಿಸುತ್ತಿದ್ದ ರಾಷ್ಟ್ರೀಯ ಆಂದೋಲನವು ಹಿರೇಕೆರೂರ ಪ್ರದೇಶಕ್ಕೂ ತಲುಪಿತು. ಈ ಭಾಗಕ್ಕೆ ಚಳುವಳಿ ತಡವಾಗಿ ತಲುಪಿದರೂ ಸಹ 1931ರ ಸುಮಾರಿನಲ್ಲಿ ದೇಶದ ಗಮನ ಸೆಳೆದಿದ್ದು ಮಹತ್ತರವಾಗಿದೆ. ಆರಂಭಿಕವಾಗಿ ಇಲ್ಲಿ ರಾಜಕೀಯ ಚಟುವಟಿಕೆ ನೋಡಿದಾಗ 1923ರಲ್ಲಿ ಹಾವೇರಿಯಲ್ಲಿ ಧಾರವಾಡ ಜಿಲ್ಲಾ ಪರಿಷತ್ತು ಆಗ ಖಾದಿ ಪ್ರದರ್ಶನ ಮತ್ತು ದನಗಳ ಪರಿಸೆಯನ್ನು (ಜಾತ್ರೆ) ಏರ್ಪಾಡು ಮಾಡಲಾಯಿತು. ಅದರ ಜೊತೆ ರಾಷ್ಟ್ರೀಯ ಪದ್ಯಗಳನ್ನು ಹಾಡುವ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಒಂದು ರಾಜಕೀಯ ವಾತಾವರಣವು ಹಿರೇಕೆರೂರ ಪ್ರದೇಶಕ್ಕೆ ಪಸರಿಸಿತು. ಏಕೆಂದರೆ, ಈ

ಭಾಗದಿಂದಲೂ ಹಲವು ಜನರು ಆಗಮಿಸಿದ್ದರು. ಆಗ ರಾಜಗೋಪಾಲಾಚಾರಿ, ಹಾಗೆಯೇ ಗಂಗಾಧರರಾವ್ ದೇಶಪಾಂಡೆ, ಸದಾಶಿವರಾವ್ ಕರ್ನಾಡ್, ರು.ರಾ. ದಿವಾಕರ, ದ.ಪ. ಕರಮರಕರ, ಮಧ್ವರಾವ್ ಕಬ್ಬೂರ, ನಾರಾಯಣರಾವ್ ಕಬ್ಬೂರ, ಕಡಪಾ ರಾಘವೇಂದ್ರರಾವ್, ಗದುಗಿನ ಅನಂತರಾವ್, ಜಾಲಿಹಾಳ ಮೊದಲಾದ ಮುಖಂಡರು ಬಂದಿದ್ದರು. ಡಾ. ಹರ್ಡೀಕರರು ತಮ್ಮ ಸ್ವಯಂ ಸೇವಕರೊಂದಿಗೆ ಪರಿಷತ್ತಿನ ವ್ಯವಸ್ಥೆಯನ್ನು ನೋಡಿಕೊಂಡರು. ಹೀಗೆ ಇಂತಹ ಹಲವಾರು ಮಹನೀಯರ ಪ್ರಭಾವ ಎನ್ನುವಂತೆ ಈ ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ಸಂದೇಶವನ್ನು ಮುಟ್ಟಿಸಲು ಸನ್ನದ್ಧರಾಗಿ ಜಾಗೃತಿ ಮೂಡಿಸಿದರು.

ಈ ಭಾಗದಲ್ಲಿ ಚಳುವಳಿಯನ್ನು ಹುಟ್ಟಿ ಹಾಕಿದ ಪ್ರಮುಖ ನಾಯಕರುಗಳೆಂದರೆ ಕಚವಿಯ ವೀರನಗೌಡ ಪಾಟೀಲ ಹಾಗೂ ತಿ.ರು. ನೇಸ್ವಿ ಇವರ ಮುಖಂಡತ್ವದಲ್ಲಿ 1931ರ ಕರ ನಿರಾಕರಣ ಆಂದೋಲನವು ದೇಶದ ಗಮನ ಸೆಳೆದಿದ್ದು ಮುಖ್ಯವಾಗಿದೆ. ಮುಂದೆ ಅದೇ ಪ್ರಕಾರ 1942ರ ಚಳುವಳಿಯಲ್ಲಿ ಕೂಡ ಈ ಭಾಗದ ಜನಸಾಮಾನ್ಯರು ತೀವ್ರವಾಗಿ ಭಾಗವಹಿಸಿದ್ದರು.

**ಕರ ನಿರಾಕರಣ ಚಳುವಳಿ:**

ಹಿರೇಕೆರೂರ ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ವಾತಾವರಣ ಮೂಡಿ 1921ರ ನಂತರ ಕಾಂಗ್ರೇಸ್ ಧ್ಯೆಯೋದ್ದೇಶಗಳು ಮತ್ತು ಅದು ಮಾಡಿದ ಕಾರ್ಯಗಳ ಸ್ಪಷ್ಟಚಿತ್ರ ಗ್ರಾಮೀಣ ಭಾಗದಲ್ಲಿ ಮೂಡಲು ಪ್ರಾರಂಭಿಸಿದ್ದು 1924ರ ಬೆಳಗಾವಿ ಕಾಂಗ್ರೇಸ್ ಅಧಿವೇಶನದ ನಂತರವೇ ಎಂದು ಭಾವಿಸಬಹುದು. ಬೆಳಗಾವಿ ಕಾಂಗ್ರೇಸ್ ಅಧಿವೇಶನಕ್ಕೆ ಹೋಗಿ ಬಂದ ವೀರನಗೌಡ ಪಾಟೀಲ ಮತ್ತು ನಾಗಮ್ಮ ಪಾಟೀಲ ಹಾಗೂ ಇತರರು ಹಿರೇಕೆರೂರ ಪ್ರದೇಶದಲ್ಲಿ ರಾಷ್ಟ್ರೀಯ ಚಳುವಳಿಯ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಯೋಚಿಸಿದರು. ಆದರೆ, ಆ ವಿಚಾರಗಳು ಮೂರ್ತ ಸ್ವರೂಪ ಪಡೆದಿದ್ದು 1930ರ ನಂತರವೇ ಎಂದು ಹೇಳಬಹುದು.

ಮಹಾತ್ಮ ಗಾಂಧೀಜಿಯವರು 1930ರ ಮಾರ್ಚ್ 12 ರಿಂದ ದಂಡಿಯಾತ್ರೆ ಆರಂಭಿಸಿದರು. ಇದು ಉಪ್ಪಿನ ಸತ್ಯಾಗ್ರಹವೆಂದು ಪ್ರಸಿದ್ಧಿಯಾಯಿತು. ಮುಂದೆ "ಕಾನೂನುಭಂಗ" ಚಳುವಳಿ ಇಂದರಿಂದಲೇ ಪ್ರಾರಂಭವಾಯಿತು. ಇದರ ಜೊತೆಯಲ್ಲಿಯೇ ಕರ್ನಾಟಕದ ಕೆಲವೆಡೆ ಕರ ನಿರಾಕರಣೆ ಆಂದೋಲನವು ಪ್ರಾರಂಭವಾಯಿತು.

ಗುಜರಾತ್ ಪ್ರಾಂತ್ಯದ ಬಾರಡೋಲಿ ರೈತ ಬಾಂಧವರು ಪ್ರಪ್ರಥಮವಾಗಿ 1928 ರಲ್ಲಿಯೇ ಕರ ನಿರಾಕರಣೆ ಆಂದೋಲನದಲ್ಲಿ ಭಾಗವಹಿಸಿ ದೇಶಕ್ಕೆ ಪರಿಪಾಠ ಹಾಕಿಕೊಟ್ಟರು. ಮುಂದೆ 1931 ರಲ್ಲಿಯೂ ಕೂಡಾ ಮತ್ತೆ ಅವರು ಹೋರಾಟಕ್ಕಿಳಿದರು. ಇದರ ನಾಯಕತ್ವವನ್ನು ಸರದಾರ ವಲ್ಲಭಬಾಯಿ ಪಟೇಲರು ವಹಿಸಿದ್ದರು. ಹೋರಾಟದ ಪ್ರಭಾವವು ದಕ್ಷಿಣದ ಪ್ರದೇಶಗಳ ಮೇಲೆ ಬಿದ್ದು, ಅವುಗಳಲ್ಲಿ ಕರ್ನಾಟಕದ ಸಿದ್ದಾಪುರ, ಶಿರಸಿ, ಅಂಕೋಲಾ, ಹಿರೇಕೆರೂರ ರೈತರುಗಳು ನಡೆದುಕೊಂಡ ರೀತಿಯ ಸಾಮೂಹಿಕ ಅಹಿಂಸೆಯ ಪ್ರಯೋಗದಲ್ಲಿ ಒಂದು ಮಹತ್ತರ ಹೆಜ್ಜೆಹಾಕಿದರು.

192930 ರಲ್ಲಿ ಹಿರೇಕೆರೂರ ಪ್ರದೇಶದಲ್ಲಿ ಸರಿಯಾಗಿ ಮಳೆ ಆಗಲಿಲ್ಲ. ಮರು ವರ್ಷವೂ ಅದೇ ಪರಿಸ್ಥಿತಿ ಮುಂದುವರೆಯಿತು. ಇದರಿಂದ ಬಡತನದಿಂದ ಕಂಗೆಟ್ಟ ಈ ರೈತರುಗಳನ್ನು ಕೇಳುವವರೇ ಇಲ್ಲವಾಗಿದ್ದರು, ರೈತರಿಗೆ ಕರ ನಿರಾಕರಣೆ ಹೋರಾಟ ಮಾಡುವುದೊಂದೇ ದಾರಿ ಕಾಣುತ್ತಿದ್ದಿತು. ಇಂಥ ಪರಿಸ್ಥಿತಿಯಲ್ಲಿ ಕಚವಿ ಗ್ರಾಮದ ವೀರನಗೌಡ

ಪಾಟೀಲರು ಪರಿಸ್ಥಿತಿಯನ್ನು ಚೆನ್ನಾಗಿ ಅರಿತವರಾಗಿದ್ದರು. ಹಾಗೂ "ಬಾರಡೋಲಿ ಕರ ನಿರಾಕರಣೆ ಮಾಡಿದ್ದನ್ನು ಅವರು ಸ್ವತಃ" ಕಣ್ಣಾರೆ ಕಂಡು ಬಂದವರಾಗಿದ್ದರು. ಅಷ್ಟೇ ಅಲ್ಲ, ಅಲ್ಲಿಯ ವಸ್ತುಸ್ಥಿತಿಯನ್ನು ನೋಡಿ ಮುಂದಾಳುಗಳೊಡನೆ ಚರ್ಚಿಸಿ ಕರ್ನಾಟಕದಲ್ಲಿ ಕರ ನಿರಾಕರಣೆ ಮಾಡಲು ಸಾಧ್ಯವಿದೆಯೇ ಎಂಬ ಬಗ್ಗೆ ಇದ್ದ ಹಲವು ಬಗೆಯ ಆಲೋಚನೆ ಕೊನೆಗೆ ಇಲ್ಲಿಯೂ ಕೂಡ ಕರ ನಿರಾಕರಣೆ ಚಳುವಳಿ ಆರಂಭಿಸಿದರು.

ಕರ ನಿರಾಕರಣೆ ಆಂದೋಲನ ಪ್ರಾರಂಭಿಸಲು ಪೂರ್ವತಯಾರಿಯಲ್ಲಿ ಟಿ.ಆರ್. ನೇಸ್ವಿ ಹಾಗೂ ವೀರನಗೌಡ ಪಾಟೀಲರು ದಿನಾಂಕ 17/05/1930 ರಂದು ಹುಬ್ಬಳ್ಳಿಯಲ್ಲಿ ನೆರೆದಿದ್ದ ಕೆ.ಪಿ.ಸಿ.ಸಿ. ಕೌನ್ಸಿಲ್ ಸಭೆಯಲ್ಲಿ ಇವರು ಭಾಗವಹಿಸಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀನಿವಾಸರಾವ್ ಕೌಜಲಗಿ ವಹಿಸಿದ್ದರು. ಅಂದಿನ ಸಭೆಯಲ್ಲಿ ಪ್ರಮುಖ ಕಾರ್ಯಕ್ರಮಗಳು ನಿರ್ಧಾರಗೊಂಡವು. ಆಗ ವಿದೇಶಿ ಬಟ್ಟೆ ಬಹಿಷ್ಕಾರ, ಸೆರೆ ಸೇಂದಿ ಬಹಿಷ್ಕಾರ, ಸಿಂದಿಗಿಡ ಕಡಿಯುವುದು, ಹುಲ್ಲುಬನ್ನಿ ಕೊಡದಿರುವುದು ಮುಂತಾದವುಗಳ ಬಗ್ಗೆ ಚರ್ಚೆಯಾದವು.

ನೇಸ್ವಿಯವರು ಈ ಎಲ್ಲ ಮೇಲಿನ ಪ್ರಮುಖ ಕಾರ್ಯಕ್ರಮಗಳನ್ನು ಹಿರೇಕೆರೂರ ಪ್ರದೇಶದಲ್ಲಿ ಹಂತ ಹಂತವಾಗಿ ಮಾಡಬೇಕೆಂದು ವಿಚಾರದಲ್ಲಿದ್ದರು. ಹಾಗೆಯೇ ವೀರನಗೌಡ ಪಾಟೀಲರು "ಕರ ನಿರಾಕರಣೆ ಚಳುವಳಿ" ಪ್ರಾರಂಭಿಸಲು ಹೇಳಿದಾಗ ತಮ್ಮ ವಿಚಾರಕ್ಕೆ ಕಾಲ ಕೂಡಿ ಬಂದಿತೆಂದು ಒಪ್ಪಿಕೊಂಡ ತಿ.ರು. ನೇಸ್ವಿಯವರು ಹಿರೇಕೆರೂರಿಗೆ ಹೋದ ಮರುದಿನದಿಂದಲೇ ರೈತರನ್ನು ಭೇಟಿಯಾಗುವುದು ಹಾಗೂ ಸರಕಾರಕ್ಕೆ ಕಂದಾಯ ಕಟ್ಟದಿರುವಂತೆ ಮನವೊಲಿಸಲು ಪ್ರಾರಂಭಿಸಿದರು.

ಯಾವುದೇ ಚಳುವಳಿ ಯಶಸ್ವಿಯಾಗಿ ನಡೆಯಬೇಕಾದರೆ ಪೂರ್ವತಯಾರಿ ಮುಖ್ಯ. ಅದರಂತೆಯೇ ದಿನಾಂಕ 25/01/1931 ರಂದು ಹಿರೇಕೆರೂರ ಪ್ರದೇಶದ ರೈತರು ಹಂಸಭಾವಿಯಲ್ಲಿ "ತಾಲೂಕು ರೈತ ಪರಿಷತ್ತು" ಸಭೆ ಕರೆದು ಸಮಾವೇಶಗೊಂಡಿತು. ಇದನ್ನು ಹಿರೇಕೆರೂರ ತಾಲೂಕಿನ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾಗಿದೆ. ಅಂದು ಸುಮಾರು 3000 ರೈತರು ತಾಲೂಕಿನ ಹಲವು ಭಾಗಗಳಿಂದ ಆಗಮಿಸಿದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ಹುಬ್ಬಳ್ಳಿಯ ಶ್ರೀ ಪಾವಟೆ ವಕೀಲರು ವಹಿಸಿದ್ದರು. ಅಂದಿನ ಸಮ್ಮೇಳನದಲ್ಲಿ ಬರಗಾಲ ಪರಿಸ್ಥಿತಿ ಬಗ್ಗೆ ತಿಳುವಳಿಕೆ ನೀಡಿ ಒಂದು ನಿರ್ಣಯ ತೆಗೆದುಕೊಂಡರು. ಅದರಂತೆ, ರೈತರ ಕಂದಾಯವನ್ನು ಸರ್ಕಾರ ಸೂಟ್ ಮಾಡಬೇಕು, ಮಾಡದಿದ್ದ ಪಕ್ಷದಲ್ಲಿ ಯಾರೂ ಎಂತಹ ಪರಿಸ್ಥಿತಿಯಲ್ಲಿಯೂ ಕಂದಾಯ ಕಟ್ಟಬಾರದೆಂದು ನಿರ್ಣಯಿಸಿದರು. ಹಾಗೊಂದು ವೇಳೆ ಸರಕಾರ ಪ್ರತಿಕ್ರಿಯಿಸದಿದ್ದರೆ ರೈತರೆಲ್ಲ "ಕರ ನಿರಾಕರಣೆ" ಆಂದೋಲನ ಮಾಡಬೇಕಾಗುತ್ತದೆ ಎಂದು ಸಮಾವೇಶದಲ್ಲಿ ರೈತರೆಲ್ಲ ಒಪ್ಪಿಕೊಂಡು ಅವರು ಒಕ್ಕೊರಲಿನಿಂದ ಜಯಕಾರ ಮಾಡುವ ಮೂಲಕ ನಿರ್ಣಯವನ್ನು ಸ್ವಾಗತಿಸಿದರು. ಇದರಿಂದ ಹಿರೇಕೆರೂರ ಪ್ರದೇಶದಲ್ಲಿ ಕರ ನಿರಾಕರಣೆ ಚಳುವಳಿಯ ಮುಂದಿನ ರೂಪುರೇಷೆಗಳನ್ನು ತಯಾರಿಸಿದಂತಾಯಿತು. ಈ ಅವಧಿಯಲ್ಲಿಯೇ ಕೆ.ಪಿ.ಸಿ.ಸಿ ಯವರು ಈ ಚಳುವಳಿಯನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ಪ್ರಾದೇಶಿಕ ಕಾಂಗ್ರೇಸ್ ಕಮೀಟಿಯಲ್ಲಿ ನಿರ್ಣಯಿಸಿ, ಪಾಟೀಲ ವೀರನಗೌಡರನ್ನು ಇದರ ನಾಯಕರೆಂದು, ಟಿ.ಆರ್. ನೇಸ್ವಿಯವರನ್ನು ಸ್ಥಾನೀಯ ನಾಯಕರೆಂದು (Leader on the spot) ನೇಮಿಸಿತು. ಹೀಗೆ ಬ್ರಿಟೀಷ ವಸಾಹತುಶಾಹಿ ವಿರುದ್ಧ ಹೋರಾಟದ ವೇದಿಕೆ ಸಜ್ಜುಗೊಂಡಿತು.

ಎಲ್ಲರೂ ಸೇರಿ ಕಚವಿ ವೀರನಗೌಡರನ್ನು ನಾಯಕರನ್ನಾಗಿ ಮಾಡಿದರು. ಆಗ ಹಿರೇಕೆರೂರ ಪ್ರದೇಶದಲ್ಲಿ ಅಗತ್ಯವಾಗಿ 'ಕರ ನಿರಾಕರಣೆ' ಆಂದೋಲನ ಸಂಘಟಿಸಲು ಮುಂದಾಗುವಂತಾಯಿತು. ಇವರ ಒಂದು ಮಹತ್ವದ ಕಾರ್ಯದಲ್ಲಿ ತಿ.ರು. ನೇಸ್ವಿಯವರ ಕಾರ್ಯ ಮುಖ್ಯವಾಗಿದೆ. ಅದೇ ಪ್ರಕಾರ ಕೆ.ಎಫ್. ಪಾಟೀಲ, ಗುದ್ಲಪ್ಪ ಹಳ್ಳಿಕೇರಿ ಮುಂತಾದವರು ಕೂಡ ತಾಲೂಕಿನ ಕರ ನಿರಾಕರಣೆ ಚಳುವಳಿಗೆ ನೆರವಾದರು. ವೀರನಗೌಡರು 1931ನೇ ಜನವರಿ 6ನೇ ತಾರೀಖಿಗೆ ಹಂಸಭಾವಿಗೆ ಬಂದು ಕರ ನಿರಾಕರಣೆ ಆಂದೋಲನದಲ್ಲಿ ಸಕ್ರಿಯವಾಗಿ ಭಾಗಿಯಾದರು. ಚಳುವಳಿ ಈ ಪ್ರದೇಶದಲ್ಲಿ ಹರಡಿ ಸರಕಾರದ ವಿರುದ್ಧ ಘೋಷಣೆಗಳು ಮೊಳಗತೊಡಗಿದವು. ಇಲ್ಲಿಯ ಸ್ಥಿತಿಯನ್ನು ಅವಲೋಕಿಸುತ್ತಾ ಹುಬ್ಬಳ್ಳಿಧಾರವಾಡ ಕಾರ್ಯಕರ್ತರು ಮಾರ್ಚ್ 8 ರಂದು ಹುಬ್ಬಳ್ಳಿಯಲ್ಲಿ ಸಭೆ ಸೇರಿ ಕರ ನಿರಾಕರಣೆ ಬಗ್ಗೆ ವಿಚಾರ ವಿನಿಮಯ ಮಾಡಿ ಶಿರಸಿ ಸಿದ್ದಾಪುರ ಮತ್ತು ಹಿರೇಕೆರೂರ ಪ್ರದೇಶಗಳಲ್ಲಿ ಕರ ನಿರಾಕರಣೆ ಮಾಡಿದ ರೈತರು, ಈ ಸಂದರ್ಭದಲ್ಲಿ ಅನುಸರಿಸಲಿಕ್ಕೆ ಧೋರಣೆಯ ಬಗ್ಗೆ ಒಂದು ಪ್ರಕಟಣೆಯನ್ನು ಹೊರಡಿಸಿದರು. ಶಿರಸಿ, ಸಿದ್ದಾಪುರ, ಹಿರೇಕೆರೂರ ಪ್ರದೇಶದ ಜನರು ರಾಜಕೀಯ ಉದ್ದೇಶಕ್ಕಾಗಿ ಕರ ನಿರಾಕರಣೆ ಮಾಡಿಲ್ಲ, ನಾವು ಸ್ವರಾಜ್ಯ ಸಿಗುವವರೆಗೆ ಲೆವಿ (ಕಂದಾಯ) ಕೊಡುವುದಿಲ್ಲವೆಂದು ಅವರು ಸಾರಿಲ್ಲ. ನಮ್ಮ ಸ್ಥಿತಿ ಕೆಟ್ಟಿದೆ, ಕಾರಣ, ನಮ್ಮಿಂದ ಲೆವಿ (ಕಂದಾಯ) ಕೊಡುವುದು ಸಾಧ್ಯವಿಲ್ಲವೆಂದು ಹೇಳುತ್ತ ಬಂದಿರುವರು ಎಂದು ನಿರ್ಣಯಿಸಿದರು. ಹೀಗೆ ಕರ ನಿರಾಕರಣೆ ಆಂದೋಲನ ಎಲ್ಲಾ ಕಡೆ ಗಮನ ಸೆಳೆದಿತ್ತು. ಆದರೆ, ಅದು ಕೇವಲ ಸ್ಥಳೀಯ ರೈತಾಪಿ ವರ್ಗದ ಪ್ರತಿರೋಧವಾಗಿರದೆ ನಂತರದಲ್ಲಿ ಈ ಭಾಗದ ರಾಷ್ಟ್ರೀಯ ಸ್ವರೂಪತೆಯನ್ನು ಹೊಂದಿತು.

ಕರ ನಿರಾಕರಣೆ ಆಂದೋಲನ ಹಿರೇಕೆರೂರ ಪ್ರದೇಶವನ್ನು ಸಂಪೂರ್ಣವಾಗಿ ವ್ಯಾಪಿಸಿಬಿಟ್ಟಿತು. ಇದನ್ನರಿತ ಸರಕಾರವು ಆಣೆವಾರಿ ಮಾಡಿ ವರದಿ ಸಲ್ಲಿಸಲು ತಮ್ಮ ಪ್ರತಿನಿಧಿಯಾಗಿ ಅಂದು ಡಿ.ಡಿ.ಸಿ ಆಗಿದ್ದ ವಿದ್ಯಾಶಂಕರ ಎಂಬ ಅಧಿಕಾರಿಯನ್ನು ಈ ತಾಲೂಕಿಗೆ ಕಳುಹಿಸಿಕೊಟ್ಟಿತು. ಕೆ.ಪಿ.ಸಿ.ಸಿ.ಯ "ಲೀಡರ್ ಆನ್ ಸ್ಪಾಟ್" ಎಂದು ನೇಮಕಗೊಂಡ ತಿ.ರು. ನೇಸ್ವಿ ಹಾಗೂ ವಿದ್ಯಾಶಂಕರ ಕೂಡಿ ಇಬ್ಬರು ಸ್ವತಃ ಹಳ್ಳಿ ಹಳ್ಳಿಗೆ ಹೋಗಿ ಬೆಳೆದು ನಿಂತ ಜಮೀನಿನಲ್ಲಿಯ ಬೆಳೆಗಳನ್ನು ಕಟಾವು ಮಾಡಿಸಿ, ಬಡಿಸಿ, ತೂರಿ, ತೂಗಿ ನೋಡಲು ಆಣೆವಾರಿ ನಾಲ್ಕು ಆಣೆಗಿಂತ ಕಡಿಮೆ ಬಂದಿತು. ಇನ್ನೂ ಕೊಯ್ದು ಬಿಟ್ಟಿದ್ದ ಬಣವೆಗಳಲ್ಲಿ ಕಿತ್ತು ಹುಲ್ಲನ್ನು ಪರೀಕ್ಷೆ ಮಾಡಿ ನೋಡಿದರು. ಅದರಲ್ಲಿ ಯಾವ ಬೆಳೆಯೂ ಸರಿಯಾಗಿ ಇಲ್ಲದ್ದು ಕಂಡು ಬಂದಿತು. ಈ ಪ್ರಕಾರ 8–10 ಹಳ್ಳಿಗಳಲ್ಲಿ ಪರೀಕ್ಷೆ ಮಾಡಿ ನೋಡಿದ ಮೇಲೆ ಡಿ.ಡಿ.ಸಿ ಯವರು ನೇಸ್ವಿಯರ ಪ್ರಮಾಣಿಕತೆ ಮೆಚ್ಚಿ ನೇಸ್ವಿಯವರು ಹೇಳಿದಂತೆ 50 – 60 ಹಳ್ಳಿಗಳ ಆಣೆವಾರಿ ಬರೆದುಬಿಟ್ಟರು. ಇದರಿಂದ ಸರಕಾರಕ್ಕೆ ಒಂದು ರೀತಿಯಲ್ಲಿ ಅಪಮಾನವಾದಂತಾಯಿತು. ಆಗ ಬ್ರಿಟೀಷ್ ಸರಕಾರ ದಿನಾಂಕ 25/02/1931 ರಿಂದ ಹಿರೇಕೆರೂರಿನಲ್ಲಿ ಮೊದಲ ಹಂತದ ಕಂದಾಯ ಪ್ರಾರಂಭಿಸಿಬಿಟ್ಟಿತು. ಸರಕಾರಕ್ಕೆ ಬರಬೇಕಾಗಿದ್ದ 1,91,000 ರೂಪಾಯಿ ಕಂದಾಯದಲ್ಲಿ ಸತತ 15 ದಿನ ಪ್ರಯತ್ನ ಮಾಡಿದಾಗ 7,000 ರೂಪಾಯಿಗಳನ್ನು ಮಾತ್ರ ವಸೂಲಿ ಮಾಡಲು ಸಾಧ್ಯವಾಯಿತು. ಕಂದಾಯವನ್ನು ಅಧಿಕಾರಿಗಳು, ಗೌಡರು, ದೇಸಾಯಿಗಳು ಹೆದರಿ ಕಟ್ಟಿದ್ದರು. ಆದರೆ, ಸಾಮಾನ್ಯ ರೈತರು ಯಾರೂ ಕಟ್ಟಿರಲಿಲ್ಲ.

ಮುಂದೆ ಸರಕಾರ ಒತ್ತಾಯದಿಂದ ಕಂದಾಯ ವಸೂಲಿ ಮಾಡಲು ನಿರ್ಧರಿಸಿತು.

ರೈತರ ಮೇಲೆ ಬೆದರಿಕೆ ದಬ್ಬಾಳಿಕೆಗಳು ಪ್ರಾರಂಭವಾದವು. ಇದರ ಪ್ರತಿಭಟನಾರ್ಥವಾಗಿ ಕಚವಿ, ಸೂಡಂಬಿ, ಸಾತೇನಹಳ್ಳಿ, ಮಡ್ಲೂರು, ಹಂಸಭಾವಿ, ಎತ್ತಿನಹಳ್ಳಿ, ಅರಿಕಟ್ಟಿ, ಡಮ್ಮಳ್ಳಿ, ಬೆಟಗೇರಿ ಮೊದಲಾದ ಗೌಡರು ತಮ್ಮ ಹುದ್ದೆಗೆ ರಾಜೀನಾಮೆ ಇತ್ತರು. ಈ ಚಳುವಳಿಯ ಮುಖ್ಯ ಕೇಂದ್ರ ಹಂಸಭಾವಿ ಎಂದು ಗುರುತಿಸಿದ ಸರಕಾರ ಈ ಊರಲ್ಲಿ ಉಗ್ರಕ್ರಮ ಕೈಗೊಂಡಿತು. ಇಲ್ಲಿಯ ಚಟುವಟಿಕೆಗಳ ಬಗ್ಗೆ 'ತಾಯಿನಾಡು' ವಿಶ್ವಕರ್ನಾಟಕ, ಸ್ವರಾಜ್ಯ, ಕನ್ನಡಿಗ, ಡೆಮೊಕ್ರಾಟ್, ವಿಜಯ, ನವಯುಗ, ರಾಜಹಂಸ, ಕ್ರಾಂತಿವೀರ, ಸ್ವದೇಶಾಭಿಮಾನಿ, ಕರ್ಮವೀರ, ಸಂಯುಕ್ತ ಕರ್ನಾಟಕ, ಕನ್ನಡವೃತ್ತ, ಕನ್ನಡ ಧುರೀಣ, ಕರ್ನಾಟಕ ವೈಭವ ಹಾಗೂ ಮುಂತಾದ ಪತ್ರಿಕೆಗಳು ಸತ್ಯಾಗ್ರಹ ಚಟುವಟಿಕೆಗಳ ಬಗ್ಗೆ ನಿರಂತರವಾಗಿ ವಿವರಗಳನ್ನು ಪ್ರಕಟಿಸುವುದರ ಮೂಲಕ ಅಮಾನುಷವಾದ ಪೊಲೀಸು ಕ್ರೌರ್ಯದ ಎದುರು ಉತ್ತರ ಕರ್ನಾಟಕದ ಜನಸಾಮಾನ್ಯರು ಪ್ರದರ್ಶಿಸಿದ ಕಾರ್ಯದ ಬಗ್ಗೆ ವರದಿ ನೀಡಿದವು. ಹಾಗೆಯೇ ಕರ ನಿರಾಕರಣೆ ಚಳುವಳಿಯ ಬಗ್ಗೆಯೂ ವರದಿಗಳು ಈ ಪತ್ರಿಕೆಗಳಲ್ಲಿ ಪ್ರಕಟಗೊಂಡವು.

ಈ ಚಳುವಳಿಯ ವಾತಾವರಣದಿಂದ ಧೃತಿಗೆಟ್ಟ ಸರಕಾರ ತಿ.ರು. ನೇಸ್ವಿಯವರನ್ನು ಬಂಧಿಸಿತು. ಬಂಧಿಸಿದ್ದು ಜನರಿಗೆ ತಿಳಿದು, ಮನೆ ಮುಂದೆ ನೆರೆದು ಸಂತೋಷದಿಂದ ಜಯಘೋಷ ಹೇಳುತ್ತ ಬೀಳ್ಕೊಟ್ಟರು. ನೇಸ್ವಿಯವರು ಜಾಮೀನಿನ ಮೇಲೆ ಬಿಡುಗಡೆ ಆಗಿ ಬಂದರು. ನಂತರ, ಸರಕಾರಿ ಅಧಿಕಾರಿಗಳು 1931 ರಂದು ಹೊಂಕಣ ಇರಿಗೇಶನ್ ಬಂಗಲೆಯಲ್ಲಿ ವಿಚಾರಣೆ ನಡೆಯುವುದೆಂದು ನೇಸ್ವಿಯವರು ಬಂದು ಹಾಜರಾಗಬೇಕೆಂದು ಆಜ್ಞೆ ಮಾಡಿದರು.

ಇತ್ತ ತಾಲೂಕಿನಲ್ಲಿ ಚಳುವಳಿ ಉಗ್ರವಾಗಿತ್ತು, ಈ ಸುದ್ದಿ ಗೊತ್ತಾದ ಕೂಡಲೆ ವೀರನಗೌಡ ಪಾಟೀಲರು, ದಿವಾಕರ ರಂಗರಾಯರು, ದೇಶಪಾಂಡೆ ಗಂಗಾಧರರಾಯರು, ಮೊದಲಾದ ನಾಯಕರು, ಕೆ.ಪಿ.ಸಿ.ಸಿ ಯ ಪರವಾಗಿ ಬೆಳಗಾವಿಯಲ್ಲಿ ದಕ್ಷಿಣ ಭಾಗದ ಕಮೀಷನರರನ್ನು ಭೇಟಿಯಾದರು. ಅವರಿಗೆ ಪ್ರತ್ಯಕ್ಷ ಪರಿಸ್ಥಿತಿಯನ್ನು ಮನವರಿಕೆ ಮಾಡಿದರು. ಆಗ ಸರಕಾರ ಒಪ್ಪಂದಕ್ಕೆ ಸಿದ್ಧವಾಯಿತು. ಆ ಒಪ್ಪಂದದ ಪ್ರಕಾರ ಆ ಸಾಲಿನ ಕಂದಾಯ ಪೂರ್ತಿ ರದ್ದಾಯಿತು. 'ನೀರ ಸಾರಿಗೆ ಸೂಟ್ ಆಯಿತು' ಮತ್ತು ಹೋರಾಟದ ನೇತಾರರಾದ ತಿ.ರು. ನೇಸ್ವಿಯವರನ್ನು ಖುಲಾಸ್ ಮಾಡಬೇಕು, ಇಂತಹದೊಂದು ಸರಕಾರಿ ಫರ್ಮಾನು ಹಿಡಿದುಕೊಂಡೇ ವೀರನಗೌಡರು ಹಂಸಭಾವಿಗೆ ಬಂದರು. ಮೂರುನಾಲ್ಕು ತಿಂಗಳಲ್ಲಿ ಚಳುವಳಿ ಇಷ್ಟೊಂದು ಉಗ್ರವಾಗಿ 'ದಕ್ಷಿಣ ಬಾರಡೋಲಿ' ಎಂದು ಹೆಸರಾಗುವಷ್ಟರ ಮಟ್ಟಿಗೆ ಕೊಂಡೊಯ್ದದ್ದಕ್ಕಾಗಿ ನೇಸ್ವಿಯವರನ್ನು ಅಭಿನಂದಿಸಿದರು. ಈ ಚಳುವಳಿಯಿಂದಾಗಿ 46 ಸಾವಿರ ರೂಪಾಯಿಗಳನ್ನು ಸಾರಿ ಸೂಟ್ ಬಿಟ್ಟರು. ಮತ್ತು ಉಳಿದೆಲ್ಲ ರೈತರಿಗೆ 90 ಸಾವಿರ ರೂಪಾಯಿ ಕಂದಾಯ ರದ್ದಾಯಿತು. ಇದರಿಂದ ಸರಕಾರಕ್ಕೆ 8–10 ಸಾವಿರ ರೂಪಾಯಿ ಮಾತ್ರ ವಸೂಲಿ ಆದಂತಾಯಿತು.

ಇದಾದ ಹಲವು ದಿನಗಳ ನಂತರ ವೀರನಗೌಡರು ಅಲ್ಲಿಯ ಜನರೊಂದಿಗೆ ಆತ್ಮೀಯ ಸಭೆ ಕರೆದಾಗ ರೈತರು ಮತ್ತು ಮುಖಂಡರು ಸೇರಿದರು. ನೇಸ್ವಿಯವರು ವೀರನಗೌಡರ ನಾಯಕತ್ವವನ್ನು ಹಾಗೂ ಚಳುವಳಿಯಲ್ಲಿ ವಹಿಸಿದ ಪಾತ್ರವನ್ನು ಹೊಗಳಿ ಮಾತನಾಡಿದರು. ಜನರೆಲ್ಲ ಉತ್ಸಾಹಗೊಂಡು "ವೀರನಗೌಡರು ನಮ್ಮ ಸರದಾರರು, ವೀರನಗೌಡರು ನಮ್ಮ ಸರದಾರರು" ಎಂದು ಘೋಷಿಸಿದರು. ಅಂದಿನಿಂದ ಕಚವಿ ವೀರನಗೌಡರು ಸರದಾರ ವೀರನಗೌಡ ಪಾಟೀಲರೆಂದು ಖ್ಯಾತರಾದರು.

**ಉಪಸಂಹಾರ:**

"ಕರಬಂದಿ ಆಂದೋಲನವನ್ನು" ಹುಟ್ಟಿ ಹಾಕಿದವರು ವೀರನಗೌಡರಾದರೆ ನಾಯಕತ್ವವಹಿಸಿ ಚಳುವಳಿ ಧೀರೋದಾತ್ತವಾಗಿ ಮುನ್ನಡೆಸಿದ ಶ್ರೇಯಸ್ಸು ತಿ.ರು. ನೇಸ್ವಿಯವರದು. ಇವರೊಡನೆ ರಾಮಣ್ಣ ಕುಲಕರ್ಣಿ, ಸಿದ್ಧಲಿಂಗಸ್ವಾಮಿ ಕಜ್ಜರಿ, ಪ್ರಭಪ್ಪ ಹಾದ್ರಿಹಳ್ಳಿ, ಶಿವಣ್ಣ ನೇಸ್ವಿ, ಚೆನ್ನಪ್ಪ ತೊಗರಸಿ, ಹೇಮಣ್ಣ ಅಂಗಡಿ, ಹೊಳಬಸಪ್ಪ ಹುಚ್ಚಗೊಂಡರ, ಲಿಂಗನಗೌಡ ಪಾಟೀಲ, ಬಸವಣ್ಣೆಪ್ಪ ಬಸಪ್ಪನವರ, ಮೌನೇಶ್ವರಪ್ಪ ದಾವಣಗೇರಿ, ಸಿದ್ಧಲಿಂಗಪ್ಪಗೌಡ ಸೂಡಂಬಿ, ಚನ್ನಬಸಯ್ಯ ಕನ್ನಗತ್ತಿ, ಕಲ್ಲಪ್ಪ ಮೆಣಸಿನಹಾಳ ಹಾಗೂ ನಾಗಮ್ಮ ಪಾಟೀಲ ಇವರೆಲ್ಲರ ಅವಿರತ ಪರಿಶ್ರಮವನ್ನು ಹಿರೇಕೆರೂರ ಪ್ರದೇಶದ ಕರಬಂದಿ ಆಂದೋಲನವು ಇತಿಹಾಸದಲ್ಲಿ ದಾಖಲಾಗಿದ್ದನ್ನು ಸ್ಮರಿಸಬಹುದು.

**ಪರಾಮರ್ಶನ ಗ್ರಂಥಗಳು:**


1. ಸುರೇಂದ್ರ ದಾನಿ : 1996, 'ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮ', ಹುಬ್ಬಳ್ಳಿ
2. ದಿವಾಕರ ರಂಗನಾಥ : 2001, ಕರನಿರಾಕರಣೆಯ ವೀರಕಥೆ, ಹುಬ್ಬಳ್ಳಿ.
3. ಪಾಟೀಲ ಭೋಜರಾಜ, 1998, ಸ್ವಾತಂತ್ರ್ಯಯೋಧ, ತಿ.ರು. ನೇಸ್ವಿ, ಹಂಸಭಾವಿ.
4. ಚಿಕ್ಕನರಗುಂದ ಬಸವರಾಜ, 2000, ಕನ್ನಡ ಪತ್ರಿಕಾ ಲೋಕದ ಧೀಮಂತರು, ಬೆಂಗಳೂರು.
5. ಶೇಖ ಅಲಿ, ಬಿ (ಪ್ರ.ಸಂ), 1997, ಕರ್ನಾಟಕ ಚರಿತ್ರೆ, ಸಂ.7, ಕನ್ನಡ ವಿ.ವಿ., ಹಂಪಿ.
6. ಭಾರತದ ಗ್ಯಾಜೆಟಿಯರ್, 1984, ಕರ್ನಾಟಕ ರಾಜ್ಯದ ಗ್ಯಾಜೆಟಿಯರ್, ಭಾಗ2, ಬೆಂಗಳೂರು.
7. ಪಾರ್ವತಿ ಇಂದುಶೇಖರ, 1991, ಕ್ರಾಂತಿವೀರ ಶಿವಣ್ಣ ನೇಸ್ವಿ, ಬೆಂಗಳೂರು.
8. ಹಿರೇಮಠ ಎಸ್.ಎಂ., 2000, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಾವೇರಿ ಜಿಲ್ಲೆ, ಕುಮಾರಪಟ್ಟಣಂ.
9. ಸರದಾರ ವೀರನಗೌಡರ, 1977, ಆತ್ಮನಿವೇದನೆ, ಹುಬ್ಬಳ್ಳಿ.
10. ಭಾರತದ ಗ್ಯಾಜೆಟಿಯರ್ (ಧಾರವಾಡ ಜಿಲ್ಲೆ ) 1995, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.